ಸಾಕ್ಷಿಯನ್ನು ದಿನಾಂಕ 06-6-2022 ರಂದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

ದಾಖಲೆಗಳಿಗೆ ನಾನು ಸಹಿ ಮಾಡುತ್ತೇನೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಎಲ್ಲಿದೆ ಎಂದು ಕೇಳಿದರೆ ಅದರಲ್ಲಿ ನನ್ನ ಸಹಿ ಕಾಣುತ್ತಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿಗೆ ದಾವಾ ಪತ್ರದ ದ್ವಿಪ್ರತಿಯ 1 ನೇ ಪುಟವನ್ನು ತೋರಿಸಲಾಗಿದೆ ಎಂದು ನ್ಯಾಯಾಲಯ ಗಮನಿಸಿರುತ್ತದೆ. (ದಿಃ 06/01/2020 ರಂದು ಶಿರಸ್ತೇದಾರರು ಮೊಹರು ಮತ್ತು ಸಹಿ ಮಾಡಿರುವುದು ಸದರಿ ಪುಟದಲ್ಲಿ ಇರುತ್ತೆ). ಈಗ ತೊರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಎಲ್ಲಿದೆ ಎಂದು ಕೇಳಿದರೆ ಅದರಲ್ಲಿ ನನ್ನ ಸಹಿ ಕಾಣುತ್ತಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿಗೆ ವಾದಿ ಪರ ಮಾನ್ಯ ಶ್ರೀ ಹೆಚ್ ಎನ್ ಡಿ ವಕೀಲರು ದಾವಾ ಪತ್ರದೊಂದಿಗೆ ಸಲ್ಲಿಸಿರುವ ವಕಾಲತ್ತು ನಾಮೆಯನ್ನು ತೋರಿಸಲಾಗಿದೆ ಎಂದು ನ್ಯಾಯಾಲಯ ಗಮನಿಸಿರುತ್ತದೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಎಲ್ಲಿದೆ ಎಂದು ಕೇಳಿದರೆ ಅದರಲ್ಲಿ ನನ್ನ ಸಹಿ ಕಾಣುತ್ತಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿಗೆ ದಿಃ 06/01/2020 ರಂದು ವಾದಪತ್ರದ ಕುರಿತಾದ ವೆರಿಫಿಕೇಶನ್ ಅಫಿಡವಿಟ್‌ನ್ನು ತೋರಿಸಲಾಗಿದೆ ಎಂದು ನ್ಯಾಯಾಲಯ ಗಮನಿಸಿರುತ್ತದೆ.

ನನ್ನ ತಂದೆಗೆ ಒಟ್ಟು 3 ಕೂರಗಿ ಆಸ್ತಿಗಳು ಬಂದಿದ್ದವು. (ಒಂದು ಕೂರಗಿ ಎಂದರೆ 4 ಎಕರೆ ಎಂದು ಮಾನ್ಯ ವಕೀಲರು ವಿವರಿಸಿರುತ್ತಾರೆ). ನನ್ನ ತಂದಗೆ ಒಂದು ಮನೆ ಬಂದಿದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಸದರಿ ಮೂರು ಕೂರಗಿ ಆಸ್ತಿಗಳ ಕುರಿತು ಈ ದಾವೆಯನ್ನು ದಾಖಲಿಸಿದ್ದೇನೆ. ಆ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಹಂಡೆ, ಬಾಂಡಲಿ, ಮುಂತಾದ ಚರಾಸ್ಥಿಗಳು ವಾಟ್ನಿಯಲ್ಲಿ ಬಂದಿದ್ದವು ಎಂದರೆ ನಿಜ. ಆ ಹಂಡೆ, ಬಾಂಡಲಿ ಮುಂತಾದ ಚರಾಸ್ಥಿಗಳಲ್ಲಿ ಹಿಸ್ಸೆ ಬೇಕು ಎಂದು ಈ ದಾವೆಯಲ್ಲಿ ಕೇಳಿಲ್ಲ ಅದನ್ನು ಈ ದಾವೆಯಲ್ಲಿ ಯಾಕೆ ಸೇರಿಸಲಿ

ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಮಗೆ ಹೊಲ, ಮನೆ ಮಾತ್ರ ಬೇಕು. ಈ ದಾವೆಯಲ್ಲಿ ಎಷ್ಟು ಸರ್ವೆ ನಂಬರಗಳನ್ನು ಸೇರಿಸಲಾಗಿದೆ ಎಂದು ಕೇಳಿದರೆ ಮೂರು ಕೂರಗಿ ಹೊಲದ ನಂಬರಗಳನ್ನು ಸೇರಿಸಲಾಗಿದೆ, ನಂಬರ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತೇನೆ. ಅದರ ಚಕಬಂದಿ ಅಥವಾ ನಂಬರ ಹೇಳಲು ಗೊತ್ತಾಗುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿಲ್ಲ. ದಾವಾ ಪತ್ರದಲ್ಲಿ ಸರ್ವೆ ನಂಬರ, ಚಕಬಂದಿಯನ್ನು ಹೇಳಿ ಬರೆಸಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾವು ಹೇಳಿದ್ದನ್ನು ವಕೀಲರು ಬರೆದಿದ್ದರು. ನನ್ನ ತಂದೆ ತೀರಿಕೊಂಡು 15 ವರ್ಷಗಳಾಗಿವೆ. ನನ್ನ ತಾಯಿ ತೀರಿಕೊಂಡು 30 ವರ್ಷಗಳಾಗಿವೆ. ನನ್ನ ತಂದೆ ತೀರಿಕೊಳ್ಳುವ ಮೊದಲೇ ನನ್ನ ಮದುವೆಯಾಗಿತ್ತು. ನನ್ನ ಅಣ್ಣತಮ್ಮಂದಿರ ಸಹಿ ನೋಡಿದರೆ ಗುರ್ತಿಸಲು ಸಾಧ್ಯವಿಲ್ಲ. ನನ್ನ ಅಕ್ಕತಂಗಿಯರ ಸಹಿ ನೋಡಿದರೆ ಗುರ್ತಿಸಲು ಸಾಧ್ಯವಿಲ್ಲ. ನನ್ನನ್ನು ಗದಿಗೆವ್ವ ಉರ್ಫ್ ನೀಲವ್ವ ಎಂದು ಕರೆಯುತ್ತಾರೆ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಗಂಡನ ಮನೆಯಲ್ಲಿ ನನ್ನನ್ನು ನೀಲವ್ವ ಎಂದು ಕರೆಯುತ್ತಾರೆ. ನಾನು ನೀಲಿವ್ವ ಉ ಬಿಳೇಬಾಳ ಎಂದು ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ಇಬ್ಬರು ಸಹೋದರರು ಕೂಡಿ ವಾಟ್ನಿ ಮಾಡಿಕೊಂಡರು ಎಂದರೆ ಸರಿಯಲ್ಲ. ನಾನು ಹಾಜರಪಡಿಸಿರುವ ನಿಪಿ.4 ಆರ್ ಟಿ ಸಿ.,ಯಲ್ಲಿ ಅಸುಂಡಿ ಮಹಾದೇವಪ್ಪ ತಂದೆ ರುದ್ರಪ್ಪರವರ ಹೆಸರಿನಲ್ಲಿ ವಾಟ್ನಿ ಪ್ರಕಾರ ಉತಾರು ಖಾತೆ ಇದೆ ಎಂದರೆ ನಿಜ. ನನ್ನ ತಂದೆ ಜೀವಂತವಿದ್ದಾಗ ನಾನು ನನ್ನ ತಂದೆ ಅಥವಾ ಸಹೋದರರ ವಿರುದ್ಧ ಹಿಸ್ಸೆ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತವಿದ್ದಾಗ ಹಿಸ್ಸೆ ಬೇಕೆಂದು ನಾನು ದಾವೆ ಸಲ್ಲಿಸಿಲ್ಲ. 2015 ರಿಂದ 2020 ನೇ ಸಾಲಿನವರೆಗೂ ನಾನು ನನ್ನ ಸಹೋದರರ ವಿರುದ್ಧ ಯಾವುದೇ ದಾವೆಯನ್ನು ಹಿಸ್ಸೆ ಕೇಳಿ ಸಲ್ಲಿಸಿಲ್ಲ ಎಂದರೆ ಅವಾಗ ಅವರು ಸ್ವತ್ತು ಮಾರಾಟ ಮಾಡಿರಲಿಲ್ಲ ಎಂದು ನುಡಿಯುತ್ತೇನೆ. ದಿಃ 17/04/2010 ರಂದು 4 ನೇ ಪ್ರತಿವಾದಿಗೆ ಒಂದು ಖರೀದಿಪತ್ರವಾಗಿತ್ತು

ಎಂದರೆ ಸರಿಯಲ್ಲ. ಗದಿಗೆಪ್ಪ ರುದ್ರಪ್ಪ ಅಸುಂಡಿ ನನ್ನ ತಮ್ಮ. ರಿ.ಸ ನಂ.186/4 ಅ ವನ್ನು ವಿನಾಯಕ ಮಹಾದೇವಸಾ ನೇತ್ರಾಣಿರವರಿಗೆ ಮಾರಾಟ ಮಾಡಿದ್ದಕ್ಕೆ ಅವರನ್ನು ಈ ದಾವೆಯಲ್ಲಿ ಸೇರಿಸಿರುವುದು ಎಂದರೆ ನಿಜ. ಆಸ್ತಿ ಖರೀದಿ ನಂತರ ಖರೀದಿದಾರನೇ ಆಸ್ತಿಯ ಕಬ್ಜಾದಲ್ಲಿ ಬರುತ್ತಾರೆ ಎಂದರೆ ಕಬ್ಜೆ ಎಂದರೆ ಏನು ಎಂದು ಅರ್ಥವಾಗುತ್ತಿಲ್ಲ ಎಂದು ನುಡಿಯುತ್ತೇನೆ. ಕಬ್ಜೆ ಎಂದರೆ ಹೊಲವನ್ನು ಊಳುವುದು, ಬೀಜ ಬಿತ್ತನೆ ಮಾಡುವುದು ಮುಂತಾದ ಕೆಲಸಗಳು ಎಂದು ಸೂಚಿಸಿದರೆ ಖರೀದಿದಾರರೇ ಅದನ್ನೆಲ್ಲ ಮಾಡುತ್ತಿದ್ದರು, ಆಪಸಾತ್‌ನಲ್ಲಿ ಮಾಡುತ್ತಿದ್ದರು ಎಂದು ನುಡಿಯುತ್ತೇನೆ. ಆ ರೀತಿ ಆಪಸಾತ್ (understanding)ನಲ್ಲಿ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ರಿ.ಸ.ನಂ.201/2 ರಲ್ಲಿ 2 ಎಕರೆ 22 ಗುಂಟೆಯಲ್ಲಿ ತುಷಾರ ಮತ್ತು ಅಜರುದ್ದೀನ್‌ರವರಿಗೆ ಗದಿಗೆಪ್ಪ ರುದ್ರಪ್ಪ ಅಸುಂಡಿರವರು ಖರೀದಿಗೆ ಕೊಟ್ಟಿದ್ದರು ಎಂದರೆ ನಿಜ. ವಿನಾಯಕ ನೇತ್ರಾಣಿರವರು ಖರೀದಿಗೆ ಹಿಡಿಯಬೇಕಾದರೆ ಗದಿಗೆಪ್ಪನ ಹೆಸರು ಉತಾರಿನಲ್ಲಿ ದಾಖಲಾಗಿತ್ತು ಎಂದರೆ ನಿಜ. ಮಹಾದೇವಪ್ಪ ಮತ್ತು ಗದಿಗೆಪ್ಪರವರು ಪರಸ್ಪರ ಛಲೋ ಇದ್ದಾರೆ ಹಾಗೂ ಮಾತನಾಡುತ್ತಾರೆ ಎಂದರೆ ನಿಜ. ರುದ್ರಪ್ಪ ನನ್ನ ತಂದೆ. ಮಹಾದೇವಪ್ಪ ಮತ್ತು ಗದಿಗೆಪ್ಪ ನನ್ನ ಸಹೋದರರರು. ನನ್ನ ತಂದೆ ಜೀವಂತವಿದ್ದಾಗ 29/11/1992 ರಲ್ಲಿ ನನ್ನ ತಂದೆ ಮತ್ತು ನನ್ನ ಸಹೋದರರು ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಈಗ ವಾಟ್ನಿ ಮಾಡಿಕೊಂಡಿದ್ದಾರೆ, ನನ್ನ ತಂದೆ ಇದ್ದಾಗ ವಾಟ್ನಿ ಮಾಡಿಕೊಂಡಿಲ್ಲ. ಈಗ ಎಷ್ಟನೇ ಇಸ್ವಿಯಲ್ಲಿ ವಾಟ್ನಿ ಮಾಡಿಕೊಂಡಿದ್ದು ಎಂದು ನಾನು ಹೇತ್ತಿರುವುದು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಆ ವಾಟ್ನಿಯನ್ನು ಪ್ರಶ್ನೆ ಮಾಡಿ ನಾನು ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಇದೇ ದಾವೆ ಸಲ್ಲಿಸಿರುವುದು ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ಸಹೋದರರು ಮಾಡಿಕೊಂಡ ವಾಟ್ನಿಯನ್ನು ಈ ದಾವೆಯಲ್ಲಿ ನಾನು ಪ್ರಶ್ನಿಸಿಲ್ಲ ಎಂದರೆ ನಿಜ. 1992 ರಲ್ಲಿಯೇ ನನ್ನ ತಂದೆ ಮತ್ತು ನನ್ನ

ಸಹೋದರರ ನಡುವೆ ವಾಟ್ನಿಯಾಗಿ ಅವಾಗಲೇ ಖುಲ್ಲಾ ಖುಲ್ಲಾ ಉತಾರು ಅವರ ಹೆಸರಿನೊಳಗೆ ಆಗಿದ್ದಾವೆ ಎಂದರೆ ಸರಿಯಲ್ಲ. ಆ ವಾಟ್ನಿಗೆ ನಾವು ಮೂರು ಜನ ಅಕ್ಕತಂಗಿಯರು ಒಪ್ಪಿಗೆ ಕೊಟ್ಟಿದ್ದೇವು ಎಂದರೆ ಸರಿಯಲ್ಲ. ಆ ಮೇರೆಗೆ ನನ್ನ ಸಹೋದರರು ಅವರವರ ಹಿಸ್ಸೆಗೆ ಮಾಲೀಕರು ಎಂದು ವ್ಯವಹಾರ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಲಾವಣಿ ಹಾಕಿಕೊಂಡಿದ್ದಾರೆ ಹಾಗೂ ವ್ಯವಹಾರ ಮಾಡಿಕೊಂಡು ಬಂದಿದ್ದಾರೆ. (ಲಾವಣಿ ಎಂದರೆ ಲೀಜ್ ಎಂದು ಮಾನ್ಯ ವಕೀಲರು ವಿವರಿಸಿರುತ್ತಾರೆ). ಆ ರೀತಿ ವ್ಯವಹಾರಗಳನ್ನು ಮಾಡಿಕೊಂಡು ಬರುವಾಗ ಮಾಲ್ಕೀ ನಾತೆಯಿಂದ ಮಾಡಿಕೊಂಡು ಬಂದಿದ್ದಾರೆ ಎಂದರೆ ನಿಜ. ಸದರಿ ಆಸ್ತಿಯಲ್ಲಿ ನನಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ಖರೀದಿದಾರರಿಂದ ರೊಕ್ಕ ಕೇಳಲು ಸುಳ್ಳು ಕೇಸ್ ಹಾಕಿರುವುದು ಎಂದರೆ ಸರಿಯಲ್ಲ. 1992 ರಲ್ಲಿ ವಾಟ್ನಿ ಆದಂತಹ ವಿಷಯ ನನಗೆ ಗೊತ್ತಿತ್ತು ಮತ್ತು 2010 ರಲ್ಲಿ 4 ನೇ ಪ್ರತಿವಾದಿಗೆ ನನ್ನ ಅಣ್ಣ ಖರೀದಿ ಕ್ಕೊಟಂತಹ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. 2010 ರಲ್ಲಿ ಜಮೀನಿನ ಕಿಮ್ಮತ್ತು ಬಹಳ ಕಡಿಮೆ ಇತ್ತು ಎಂದರೆ ಸರಿಯಲ್ಲ. ಈಗ ಭೂಮಿಯ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೆ ಹೋಗುತ್ತಿದೆ ಎಂದರೆ ಅವಾಗಲೂ ಏನೂ ಕಡಿಮೆ ಇರಲಿಲ್ಲ ಎಂದು ನುಡಿಯುತ್ತೇನೆ. ನನ್ನ ಅಣ್ಣನಿಗೆ ರೊಕ್ಕ ಕೊಟ್ಟು ವಿನಾಯಕ ನೇತ್ರಾಣಿ ಖರೀದಿ ಮಾಡಿದರು ಎಂದರೆ ಅದಕ್ಕಾಗಿಯೇ ಈ ದಾವೆ ಸಲ್ಲಿಸಿದ್ದು ಎಂದು ನುಡಿಯುತ್ತೇನೆ. ಇನ್ನೂ ಹೆಚ್ಚಿನ ರೊಕ್ಕವನ್ನು ಖರೀದಿದಾರನಿಂದ ಕೀಳಲು ಈ ದಾವೆ ಸಲ್ಲಿಸಿದ್ದು ಎಂದರೆ ಸರಿಯಲ್ಲ. ವಿನಾಯಕ ನೇತ್ರಾಣಿಯವರು ಖರೀದಿ ಹಿಡಿಯುವಾಗ ಉತಾರಿನಲ್ಲಿ ನನ್ನ ಹೆಸರು ಇರಲಿಲ್ಲ ಎಂದರೆ ನಿಜ. ಅದೇ ರೀತಿ ನನ್ನ ಸಹೋದರಿಯರ ಹೆಸರು ಅವಾಗ ಉತಾರಿನಲ್ಲಿ ಇರಲಿಲ್ಲ ಎಂದರೆ ನಿಜ. ಖರೀದಿದಾರರು ಉತಾರಿನಲ್ಲಿ ಹೆಸರಿರುವ ವ್ಯಕ್ತಿಗಳಿಂದ ಖರೀದಿ ಹಿಡಿಯುತ್ತಾರೆ ಎಂದರೆ ನಿಜ. ಉತಾರಿನಲ್ಲಿ ಹೆಸರಿಲ್ಲದ ವ್ಯಕ್ತಿಗಳು ಮಾಲೀಕರು ಇದ್ದರೆ ಖರೀದಿದಾರನಿಗೆ ಗೊತ್ತಾಗುವುದಿಲ್ಲವೆಂದರೆ ಇರಬಹುದು.

ಗದಿಗೆಪ್ಪನ ಹೆಸರು ಉತಾರಿನಲ್ಲಿ ಇದ್ದಿದ್ದಕ್ಕೆ ಆತನೇ ಮಾಲೀಕನೆಂದು ಸದ್ಭಾವನೆಯಿಂದ ವಿನಾಯಕ ನೇತ್ರಾಣಿರವರು ಸ್ವತ್ತು ಖರೀದಿ ಮಾಡಿರುವುದು ಎಂದರೆ ನಾವು 4 ಮಂದಿ ಇರುವುದು ಅವರಿಗೆ ಗೊತ್ತಿತ್ತು ಎಂದು ನುಡಿಯುತ್ತೇನೆ. ಖರೀದಿ ವ್ಯವಹಾರ ಆಗುವಾಗ ಆ ವಿಚಾರ ನನಗೆ ಗೊತ್ತಾಗಿತ್ತೇ ಎಂದರೆ ಅವಾಗ ಗೊತ್ತಿಲಿಲ್ಲ ಎಂದು ನುಡಿಯುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಗೊತ್ತಿದ್ದರೂ ಕೂಡ ಸಾಕಷ್ಟು ವರ್ಷ ಸದರಿ ಖರೀದಿಯನ್ನು ಪ್ರಶ್ನಿಸಲಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲವಾದರೂ ಕೂಡ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳತ್ತಿರುವುದು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-
ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.